ಆ) ರೂ. 12.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ತಾ: 15–10–90 ರವರೆಗೆ ಬಂದಿರುವ ವರದಿಗಳ ಪ್ರಕಾರ ರೂ. 3.01 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಇ) ಸಾಮಾನ್ಯ ಯೋಜನೆ ಕಾರ್ಯಕ್ರಮಗಳ ಜೊತೆಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೊಂಡು ಕುಡಿಯುವ ನೀರು ಪೂರೈಕೆ, ಮೇವು ಪೂರೈಕೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಹಣವನ್ನು ಬಿಡುಗಡೆ ಮಾಡಿದೆ.

ಈ) ಕುಡಿಯುವ ನೀರು ಪೂರೈಕೆ, ಮೇವು ಪೂರೈಕೆ ಮತ್ತು ಉದ್ಯೋಗ ಸೃಜನೆ ಕಾರ್ಯಕ್ರಮಗಳು. ರೂ. 19.50 ಲಕ್ಷ.

ಭೂ ನ್ಯಾಯ ಮಂಡಳಿ ಮುಂದೆ ಇರುವ ಭೂ ವಿವಾದಗಳ ಬಗ್ಗೆ

534. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಭೂನ್ಯಾಯಮಂಡಳಿಗಳ ಮುಂದಿರುವ ಭೂ ವಿವಾದಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳು)

ಆ) ಮೇಲ್ಕಂಡ ವಿವಾದಗಳ ಇತ್ಯರ್ಥಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಜಿಲ್ಲಾ ಮೇಲ್ಮನವಿ ಪ್ರಾಧಿಕಾರಗಳ ಮುಂದಿದ್ದ ಪ್ರಕರಣಗಳ ಇತ್ಯರ್ಥದ ಹೊಣೆ ಯಾರಿಗೆ ವಹಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಒಟ್ಟು 28,479 ಪ್ರಕರಣಗಳು

ಜಿಲ್ಲಾವಾರು ವಿವರ :

1)	ಬೆಂಗಳೂರು	468
2)	ಬೆಂಗಳೂರು (ಗ್ರಾ)	336
3)	ಚಿತ್ರದುರ್ಗ	249
4)	ಕೋಲಾರ	1395
5)	ಶಿವಮೊಗ್ಗ	1073
6)	ತುಮಕೂರು	246
7)	ಬೆಳಗಾಂ	4288
8)	ಬಿಜಾಪುರ	174
9)	ಧಾರವಾಡ	1351
10)	ಉತ್ತರ ಕನ್ನಡ	741
11)	ಬಳ್ಳಾರಿ	3383
12)	ಬೀದರ್	1852
13)	ಗುಲ್ಬರ್ಗ	396
14)	ರಾಯಚೂರು	257
15)	ಚಿಕ್ಕಮಗಳೂರು	81

16) ಕೊಡಗು	5600
17) ಹಾಸನ	167
18) ಮಂಡ್ಯ	1524
19) ಮೈಸೂರು	1369
20) ದಕ್ಷಿಣ ಕನ್ನಡ	3529

ಆ) ಭೂ ನ್ಯಾಯಮಂಡಳಿಗಳನ್ನು ಪುನರ್ ರಚಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು ಶೀಘ್ರದಲ್ಲಿಯೇ ಅವುಗಳನ್ನು ಪುನರ್ ರಚಿಸಲಾಗುವುದು. ಅವುಗಳ ಪುನರ್ ರಚನೆಯಾದ ಕೂಡಲೇ ಸದರಿ ವಿವಾದಗಳ ಇತ್ಯರ್ಥಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಭೂ ಸುಧಾರಣಾ ಕಾಯಿದೆ (ತಿದ್ದುಪಡಿ 1990)ರ ಪ್ರಕಾರ ಈ ಪ್ರಕರಣಗಳ ತೀರ್ಮಾನಕ್ಕಾಗಿ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬೇಕಾಗುವುದು.

ಬಗರ್ ಹುಕುಂ ಸಾಗುವಳಿ ಬಗ್ಗೆ

609. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹುಲ್ಲುಗಾವಲುಗಳಿಗಾಗಿ ಮೀಸಲಾಗಿಟ್ಟಿರುವ ಜಮೀನುಗಳನ್ನು ಬಗರ್ ಹುಕುಂನಿಂದ ಸಾಗುವಳಿ ಮಾಡುವವರಿಗೆ ಸಾಗುವಳಿ ಪಟ್ಟಾ ಕೊಡಲು ಸರ್ಕಾರ ಯೋಚಿಸಿದೆಯೆ;

ಆ) ಹಾಗಿದ್ದಲ್ಲಿ, ರೈತರ ಹಾಗೂ ಭೂ ರೈತ ಕಾರ್ಮಿಕರ ಜಾನುವಾರುಗಳಿಗೆ ಬೇರೆ ಹುಲ್ಲುಗಾವಲು ಮೀಸಲಾಗಿಡದಿದ್ದಲ್ಲಿ ಕೃಷಿಗೆ ಅವಶ್ಯವಿರುವ ಪಶು ಸಂಪತ್ತಿನ ಅಭಿವೃದ್ಧಿಗೆ ಹಾಗೂ ಹೈನು ಅಭಿವೃದ್ಧಿಗೆ ತುಂಬಲಾರದ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಪ್ರತಿ ಗ್ರಾಮಗಳಲ್ಲಿ ಹುಲ್ಲುಗಾವಲುಗಳನ್ನು ಸಾಗುವಳಿ ಮಾಡದಂತೆ, ಸಾಗುವಳಿ ಮಾಡಿದ್ದರೆ ಸದರಿ ಹುಲ್ಲುಗಾವಲು ಜಮೀನುಗಳಿಂದ ಬಗರ್ ಹುಕುಂ ಸಾಗುವಳಿದಾರರನ್ನು ಹೊರಗೆ ಹಾಕಲು ಸರ್ಕಾರ ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಲು ಇಚ್ಛಿಸುವ ಕ್ರಮಗಳೇನು?

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು.

ಆ) ಸಕ್ರಮಗೊಳಿಸುವ ಯೋಜನೆಯಿಂದ ಜಾನುವಾರುಗಳಿಗೆ ಮತ್ತು ಹೈನು ಅಭಿವೃದ್ಧಿಗೆ ತೊಂದರೆಯಾಗುವ ಪಕ್ಷದಲ್ಲಿ, ಅಕ್ಕಪಕ್ಕದಲ್ಲಿರುವ ಅರಣ್ಯ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸಲು ಸರ್ಕಾರವು ಅನುವು ಮಾಡಿಕೊಡುತ್ತದೆ.

ಇ) ಸಕ್ರಮಗೊಳಿಸಲು ಉದ್ದೇಶಿಸಿರುವ ಮಿತಿಗಿಂತಲೂ ಅತಿಕ್ರಮಿಸಿರುವ ವಿಸ್ತೀರ್ಣವು ಮೀರಿದ್ದಲ್ಲಿ, ಅಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸಲಾಗುವುದಿಲ್ಲ. ಹಾಗೂ ಇನ್ನು ಮುಂದೆ ಗೋಮಾಳಗಳನ್ನು ಅತಿಕ್ರಮಿಸಿದ್ದಲ್ಲಿ, ಅಂತಹವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ.

ನಗರ ಭೂ ಪರಿಮಿತಿ ಕಾಯ್ದೆ ಬಗ್ಗೆ